ಕಂದನಿಗೆ? ಅಯ್ಯೋ ನನ್ನ ಮಗೂನ ಏನೋ ಮಾಡ್ಬಿಟ್ರಪ್ಪ ಇವ್ರು" ಎಂದು ಚೀರುತ್ತಲೇ ಇದ್ದಳು. ಆಕೆಯ ಆತಂಕ ಸಹಜವಾಗಿತ್ತು. ಸಿಟ್ಟೂ ಸರಿಯಿತ್ತು.

ಮುಂದುವರೆದು ಫೋನಿನಲ್ಲಿ ನನ್ನ ಬೇಜಬ್ದಾರಿತನ ಕುರಿತು ಬೈಯ್ಯುತ್ತಲೇ ಇದ್ದಳು. ಅಷ್ಟರಲ್ಲಿ ಮಾವನ ಧ್ವನಿ ಹೆಂಡತಿ ಪಕ್ಕದಲ್ಲೇ ಕೇಳಿಸಿತು. ಅವರು ಆಗಷ್ಟೇ ದಯಮಾಡಿದ್ದರು. ''ಕೊಡಿಲ್ಲಿ ಫೋನು'' ಎಂದು ಮೊಬೈಲ್ ಕಸಿದುಕೊಂಡು ಅನೇಕ ಪ್ರಶ್ನೆ ಕೇಳಿದರು. ಉತ್ತರ ಹೇಳುವ ಸ್ಥಿತಿಯಲ್ಲಿಲ್ಲದ ನಾನು ಹೆದರಿ ಫೋನ್ ಕಟ್ ಮಾಡಿದೆ. ಮಗಳು ಯಾವುದಾದರೂ ಗಲ್ಲಿಯಲ್ಲಿ ಹೊರಟು ಬಿಟ್ಟಳೋ ಎಂದು ಮೈದಾನದ ಆಚೆಗಿದ್ದ ಬೀದಿಗಳ ಕಡೆ ಹೊರಳಿದೆ. ಅವಳು ಸಿಕ್ಕೇ ಸಿಗುತ್ತಾಳೆ ಎಂಬ ನಂಬಿಕೆ ನನ್ನದು.

ಸಿಕ್ಕವರಿಗೆಲ್ಲಾ ನನ್ನದೊಂದೇ ಅಳುಮೋರೆ ಪ್ರಶ್ನೆ, ''ಕೆಂಪು ಫ್ರಾಕ್ ಹಾಕಿಕೊಂಡಿದ್ದ ಚಿಕ್ಕ ಪಾಪು ಇತ್ತ ಕಡೆ ಏನಾದರೂ ಬಂದದ್ದು ನೋಡಿದಿರಾ" ಎಂಬುದು. ನನ್ನ ಸಡನ್ನಾದ ಪ್ರಶ್ನೆಗೆ ಅವರ ಪ್ರತಿಕ್ರಿಯೆ ವಿಚಿತ್ರವಾಗಿರುತ್ತಿತ್ತು. ಅವಾಕ್ಕಾಗಿ ನನ್ನ ನಿಲ್ಲಿಸಿಕೊಂಡು "ಬರ್‍ರಿ ಇಲ್ಲಿ ರೀ ಇವರೆ. ನೆಟ್ಟಗೆ ನಿಂತು ಮಾತಾಡ್ರಿ. ಎಣ್ಣೆಗಿಣ್ಣೆ ಏರಿಸಿ ಮನೇನೆ ಮರ್ತವರ ಥರ ಕಾಣ್ತೆರಲ್ರಿ. ಬನ್ನಿ ಇಲ್ಲಿ ಕೂತು ಡೀಟೈಲಾಗಿ ಏನೇನಾಯಿತು ಹೇಳಿ. ಆಮೇಲೆ ವಿಚಾರಿಸೋಣ'' ಎಂದು ಸೋಮಾರಿಕಟ್ಟೆಗೆ ಮಾತುಕತೆಗೆ ಕರೆಯುತ್ತಿದ್ದರು.

ನನ್ನ ಹತ್ತಿರ ಅಷ್ಟು ಸಮಯವಿರಲಿಲ್ಲ. ಕೇಳುತ್ತಾ ಕೇಳುತ್ತಾ ಬಲು ಬೇಗ ಅನೇಕ ಬೀದಿಗಳ ಸುತ್ತಬೇಕಿತ್ತು. ನನ್ನ ಪ್ರಶ್ನೆ ಚಿಕ್ಕದಾಗಿದ್ದರೂ ಜನರ ವಿಚಾರಣೆ ದೊಡ್ಡದಾಗಿತ್ತು. ನನ್ನ ಆತಂಕಕ್ಕಿಂತ ಅವರಿಗೆಲ್ಲಾ ವಿಷಯವನ್ನು ಬಿಡಿಬಿಡಿಯಾಗಿ ಕೊನೆಗೆ ಇಡಿಯಾಗಿ ತಿಳಿದುಕೊಳ್ಳುವ ಚಟ. ಬೀದಿಯಲ್ಲಿ ಸಿಕ್ಕವರದು ದೇಶಾವರಿಯಾದ ಹಲವಾರು ಪ್ರಶ್ನೆ, ಉಪಪ್ರಶ್ನೆಗಳು. ಎಲ್ಲರಿಗೂ ಉತ್ತರ ಹೇಳಿ ನನ್ನ ನಾಲಿಗೆ ಒಣಗಿ ಹೋಗಿತ್ತು. ಜನರು ಪಟಪಟನೆ ಕೇಳುವ ಪ್ರಶ್ನೆಗಳ ಭಾರೀ ವಿಚಾರಣೆಯಿಂದ ನನ್ನ ತಲೆ ಸಿಡಿಯತೊಡಗಿತು. ಕೆಲವರು, "ನೋಡ್ರಿ ಸರಿಯಾಗಿ ಮಕ್ಕಳ ಕಳ್ಳನಾ" ಎಂದರೆ ಮತ್ತೊಬ್ಬರು "ಇಲ್ಲ ಬಿಡಿ, ಸಣ್ಣಗೆ ಅಳ್ತಿದ್ದಾನೆ. ಕಣ್ಣಲ್ಲಿ ನೀರಿದೆ, ಅಪ್ಪಾನೆ ಇರ್ಬೇಕು" ಎಂದು ಅವರವರೇ ಸಮಜಾಯಿಷಿ ಕೊಡುತ್ತಿದ್ದರು. ಕೆಲವರು ಬುದ್ಧಿ ಹೇಳಿದರು. ಒಂದಿಬ್ಬರು ಹುಡುಕಲು ಸಹಾಯಕರಾಗಿ ನನ್ನೊಟ್ಟಿಗೇ ಬಂದರು. ಕೆಲವರು ದೇವರಲ್ಲಿ ಹರಸಿದರು. ಕಟ್ಟೆ ಮೇಲೆ ಕೂತ ಕೆಲವರು, " ಥೂ ಇಂಥ ಬೇಜವ್ದಾರಿ ಜನರಿಗೆ ಮಕ್ಕಳು ಯಾಕ್ರ ಬೇಕು" ಎಂದು ಉಗಿದರು.

"ಮಗು ಹೆಣ್ಣೋ ಗಂಡೋ? ಏನ್ ವಯಸ್ಸು? ಆ ಮಗು ತಪ್ಪಿಸಿಕೊಂಡು ಹೋಗೋ ತನಕ ನೀಯೇನ್ ಕತ್ತೆ ಕಾಯ್ತಿದ್ದಾ? ಮಗು ತಪ್ಪಿಸಿಕೊಂಡಿದ್ದು ಎಲ್ಲಿಂದ? ಮಗುಗೆ ನೀನೇನ್ ಆಗ್ಬೇಕು? ನಿಮ್ ಯಾವ ಕೇರಿ ಯಾವುದು? ಯಾವ ಜನ ನೀವು? ಏನ್ ಕೆಲಸ ಮಾಡ್ತಿಯಾ? ಇದೊಂದೇ ಮಗುನಾ? ಪಾಪು ತಪ್ಪಿಸಿಕೊಂಡಿದೆ ಅಂತ ಪೊಲೀಸ್ ಕಂಪ್ಲೆಂಟ್ ಕೊಟ್ರಾ? ಈ ಕಡೇನೆ ಬಂದಿದೆ ಅಂತ ಹೆಂಗ್ ಗೆಸ್ ಮಾಡಿದ್ರಿ?" ಎಂದು ಎಲ್ಲರೂ ರಪರಪಾಂತ ಬಿಡುವಿಲ್ಲದ ವಿಚಾರಣೆ ನಡೆಸಿದರು. ನನ್ನ ಪರಿಸ್ಥಿತಿ ಹಣ್ಣುಗಾಯಿ ನೀರುಗಾಯಾಗಿತ್ತು.

ಜನರಿಗೆ ಕೇಳುವ, ಚರ್ಚಿಸುವ, ವಿಷಯ ಎಳೆದಾಡಿ ಮಾತಾಡುವ ಚಟ. ರಾತ್ರಿ ಪುರುಸೊತ್ತಿಗೆ ಸೇರುವ ಕೆಲ ಜನರಿಗೆ ತೆವಲುಗಳು ಜಾಸ್ತಿ. ಮಾತಾಡುವ ವಿಷಯಗಳ ಕೊರತೆಯೂ ಅವರಲ್ಲಿ ಕಾಡುತ್ತಿರುತ್ತದೆ. ಅಂಥವರ ಕೈಗೆ ಸಿಕ್ಕರೆ ತಿಥಿಯಾಗುವುದೇ ಗ್ಯಾರಂಟಿ.

ಕೆಲವರು ಮಾತಿನ ನಡುವೆ ತಮ್ಮ ಊಹೆ, ಹೆದರಿಕೆ, ಹರಿಕಥೆಗಳ ಸೇರಿಸಿ ನನ್ನ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುತ್ತಿದ್ದರು. "ಈಗೀಗ ಮಕ್ಕಳು ಹಿಡಿಯೋರು ರಾಜಸ್ಥಾನ ಕಡೆಯಿಂದ ಬಂದಿದ್ದಾರಂತೆ ಕಂಡ್ರಿ. ಕಣ್ ಮುಚ್ಚಿ ಬಿಡೋದ್ರಲ್ಲಿ ಎತ್ ಬಿಟ್ತಾರಂತೆ. ಕಿಡ್ನಿ, ಕಣ್ಣು ಕಿತ್ತು ಬಾಡಿನ